ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/697/ಪಿಂಚಣಿ/ಸಿಆರ್3/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು ದಿನಾಂಕ:09-11-2023

## ಸುತ್ತೋಲೆ

ವಿಷಯ: ದಿನಾಂಕ:01/04/2012 ರಿಂದ 31/12/2015ರ ಅವಧಿಯಲ್ಲಿ ನಿವೃತ್ತಿ ಹೊಂದಿದ್ದು ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿದ್ದ ಸಿಬ್ಬಂದಿಗಳಿಗೆ ಪಿಂಚಣಿ/ಕುಟುಂಬ ಪಿಂಚಣಿ ಪರಿಷ್ಕರಣೆ ಕುರಿತಂತೆ

ಉಲ್ಲೇಖ: 1) ಮಹಾಲೇಖಪಾಲರ ಪತ್ರ ಸಂಖ್ಯೆ: PV6/Retd.2012-2015/Genl/312 Dt.10/10/2023

2) ಸರ್ಕಾರದ ಆದೇಶ ಸಂಖ್ಯೆ: FD(SPL)113 PEN 2012 Bangalore Dated 30/08/2023

-----

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಮಹಾಲೇಖಪಾಲರ ಪತ್ರದಲ್ಲಿ, ಸರ್ಕಾರದ ಆದೇಶ ಸಂಖ್ಯೆ: FD(SPL)113 PEN 2012 Bangalore Dated 30/08/2023 ಅನ್ನು ಉಲ್ಲೇಖಿಸುತ್ತಾ, ಸದರಿ ಸರ್ಕಾರಿ ಆದೇಶದನ್ವಯ ದಿನಾಂಕ:01/04/2012 ರಿಂದ 31/12/2015ರ ಅವಧಿಯಲ್ಲಿ ನಿವೃತ್ತಿ ಹೊಂದಿದ್ದು ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿದ್ದ ಸಿಬ್ಬಂದಿಗಳಿಗೆ ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ Corrective Factor ಅನ್ನು 1.839 ಗೆ ಬದಲಾಗಿ 1.6 ಎಂದು ಪರಿಗಣಿಸಿ ಪಿಂಚಣಿ ಪರಿಷ್ಕರಣೆ ಸಂಬಂಧ ಕ್ರಮ ಕೈಗೊಳ್ಳುವ ಬಗ್ಗೆ ಸೂಚನೆ ನೀಡಲಾಗಿದೆ.

ಆದ್ದರಿಂದ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ, ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿದ್ದು, ದಿನಾಂಕ:01/04/2012 ರಿಂದ 31/12/2015ರ ಅವಧಿಯಲ್ಲಿ ನಿವೃತ್ತಿ ಹೊಂದಿರುವ ಸಿಬ್ಬಂದಿಗಳ ಮಾಹಿತಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ MS Excel ತಂತ್ರಾಂಶದಲ್ಲಿ (ಆಂಗ್ಲಭಾಷೆಯಲ್ಲಿ) ನಮೂದಿಸಿ, ಸದರಿ ಸಿಬ್ಬಂದಿಗಳ ಸೇವಾಪುಸ್ತಕ ಹಾಗೂ ಮಹಾಲೇಖಪಾಲರ ಪಿಂಚಣಿ ಮಂಜೂರಾತಿ ಆದೇಶದ ಪ್ರತಿಗಳೊಂದಿಗೆ ಈ ಕಛೇರಿಗೆ ದಿನಾಂಕ:27/11/2023ರೊಳಗಾಗಿ ಸಲ್ಲಿಸುವುದು. MS Excel ತಂತ್ರಾಂಶದಲ್ಲಿ ನಮೂದಿಸಲಾಗಿರುವ ಮಾಹಿತಿಗಳ ಸಾಫ್ಟ್ ಪ್ರತಿಯನ್ನು dce.pension@gmail.com ಗೆ ರವಾನಿಸುವುದು.

ಸರ್ಕಾರದ ಆದೇಶದನ್ವಯ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆ ವಿಳಂಬಕ್ಕೆ ಆಸ್ಪದ ನೀಡದೆ ನಿಗದಿತ ದಿನಾಂಕದೊಳಗಾಗಿ ಮಾಹಿತಿಗಳನ್ನು ಹಾಗೂ ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸುವಂತೆ ಕಟ್ಟುನಿಟ್ಟಾಗಿ ಸೂಚನೆ ನೀಡಿದೆ.

ತಮ್ಮ ವಿಶ್ವಾಸಿ,

ಅಡಕ: ನಮೂನೆ

10/11/23
ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

ಇವರಿಗೆ:

1. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲ್ಬುರ್ಗಿ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು- ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದ
3. ಹೆಚ್ಚುವರಿ ಪ್ರತಿ ಮತ್ತು ಕಛೇರಿ ಪ್ರತಿ

# ಕಾಲೇಜು ಶಿಕ್ಷಣ ಇಲಾಖೆ

| ಕ್ರ. ಸಂ. | ಹೆಸರು | ಪದನಾಮ | ಕಾಲೇಜಿನ ಹೆಸರು | ನಿವೃತ್ತಿ ಹೊಂದಿದ ದಿನಾಂಕ | ಪಿಂಚಣಿಗೆ ಪರಿಗಣಿಸಲಾಗಿರುವ ಅಂತಿಮ ಮೂಲವೇತನ | ಪಿಂಚಣಿಗೆ ಪರಿಗಣಿಸಲಾಗಿರುವ ಅರ್ಹದಾಯಕ ಸೇವೆ | | | ಮಂಜೂರಾಗಿರುವ ಪಿಂಚಣಿ ವಿವರಗಳು | | | ಪಿಂಚಣಿ ಸೌಲಭ್ಯಗಳಲ್ಲಿ ಯಾವುದೇ ಮೊತ್ತವನ್ನು ತಡೆಹಿಡಿಯಲಾಗಿದ್ದಲ್ಲಿ ಮಾಹಿತಿ ನೀಡುವುದು. |
|---|---|---|---|---|---|---|---|---|---|---|---|---|
| | | | | | | ವರ್ಷ | ತಿಂಗಳು | ದಿನಗಳು | ಪಿಂಚಣಿ | ಸೇವಾ ಉಪದಾನ | ಕುಟುಂಬ ಪಿಂಚಣಿ | |
| 1 | 2 | 3 | 4 | 5 | 6 | | | 7 | 8 | 9 | 10 | 11 |
| | | | | | | | | | | | | |

ಷರಾ: ಮೇಲಿನ ವಿವರಗಳನ್ನು ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ವಾರು ಕ್ರೋಢೀಕರಿಸಿ, ಧೃಢೀಕರಿಸಿ, ಸಿಬ್ಬಂದಿಗಳ ಸೇವಾ ಪುಸ್ತಕ ಹಾಗೂ ಮಹಾಲೇಖಪಾಲರ ಪಿಂಚಣಿ ಮಂಜೂರಾತಿ ಆದೇಶದ ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು.

ಸಹಿ/-

ಜಂಟಿ ನಿರ್ದೇಶಕರು